## ಮೈಸೂರು ವಿಶ್ವವಿದ್ಯಾನಿಲಯ

**ದಿನಾಂಕ 25-03-2021ರ ಗುರುವಾರದಂದು ಪೂರ್ವಾಹ್ನ 11.00ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಮೂರನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿ.**

**ಹಾಜರಿದ್ದ ಸದಸ್ಯರುಗಳು:**

| | | |
|---|---|---|
| 1. | ಪ್ರೊ. ಜಿ.ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3. | ಪ್ರೊ. ಜಿ.ವೆಂಕಟೇಶ್ ಕುಮಾರ್ | ಸದಸ್ಯರು |
| 4. | ಶ್ರೀ ಎಂ.ಬಿ. ಗಪ್ಪಣ್ಣ | ಸದಸ್ಯರು |
| 5. | ಡಾ. ಚೈತ್ರ ನಾರಾಯಣ | ಸದಸ್ಯರು |
| 6. | ಶ್ರೀ ಕುಮಾರ | ಸದಸ್ಯರು |
| 7. | ಶ್ರೀಮತಿ ಕೆ.ನಾಗರತ್ನಮ್ಮ | ಸದಸ್ಯರು |
| 8. | ಡಾ. ಬಿ.ರಾಜಣ್ಣ | ಸದಸ್ಯರು |
| 9. | ಡಾ. ವೆಂಕಟೇಶ್ ಜೆ ಎನ್ | ಸದಸ್ಯರು |
| 10. | ಶ್ರೀ. ಆರ್.ಪ್ರದೀಪ್‌ಕುಮಾರ್ ದೀಕ್ಷಿತ್ | ಸದಸ್ಯರು |
| 11. | ಶ್ರೀ ಎಸ್.ಡಿ.ದೊಡ್ಡಚಾರಿ | ಸದಸ್ಯರು |
| 12. | ಶ್ರೀಮತಿ ವೈ.ಕೆ.ಪವಿತ್ರ | ಸದಸ್ಯರು |
| 13. | ಡಾ. ಈ.ಸಿ.ನಿಂಗರಾಜ್‌ಗೌಡ | ಸದಸ್ಯರು |
| 14. | ಡಾ. ಎಂ.ಎಸ್.ದಾಮೋದರ | ಸದಸ್ಯರು |
| 15. | ಪ್ರೊ. ಎ.ಪಿ.ಜ್ಞಾನ ಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 16. | ಪ್ರೊ. ಟಿ.ಎಸ್.ದೇವರಾಜ, ಹಣಕಾಸು ಅಧಿಕಾರಿಗಳು | ಸದಸ್ಯರು |
| 17. | ಪ್ರೊ. ಆರ್.ಶಿವಪ್ಪ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ |

**ಹಾಜರಾಗದ ಸದಸ್ಯರು:**

1. ಡಾ. ಸೈಯದ್ ಕಾರು‌ಝ ಮೊಹಿದ್ದೀನ್, ಬೆಂಗಳೂರು
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

ತದನಂತರ, ಮಾನ್ಯ ಕುಲಪತಿಗಳು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿ, ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಸಭೆಯಲ್ಲಿ ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| I | ದಿನಾಂಕ: 30-12-2020ರಂದು ಜರುಗಿದ ಎಂಟನೇ ಸಾಮಾನ್ಯ ಸಿಂಡಿಕೇಟಿನ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | 8ನೇ ಸಾಮಾನ್ಯ ಸಭೆಯ ವಿಷಯಸಂಖ್ಯೆ: 12.14ರ ಅಡಿಯಲ್ಲಿ ತೆಗೆದುಕೊಳ್ಳಲಾಗಿದ್ದ ತೀರ್ಮಾನವನ್ನು ಪುನರ್ ಪರಿಶೀಲಿಸಿ, "ಸಿಂಡಿಕೇಟ್ ಸಭೆಯು ಪೂರ್ವದಲ್ಲಿದ್ದ ನಿಯಮಾವಳಿಗಳನ್ವಯ The Candidates who have passed M.Phil. examination from any regular UGC recognized University/institutions are exempted from the Ph.D. entrance examination ಎಂಬ ಅರ್ಹತೆಯನ್ನು ಪರಿಗಣಿಸಿ ಪಿಎಚ್.ಡಿ. ಪ್ರವೇಶಾತಿಯನ್ನು 2021-22 (March 1st 2021 to February, 2022) ಶೈಕ್ಷಣಿಕ ಸಾಲಿಗೆ ಮಾತ್ರ ಸೀಮಿತಗೊಳಿಸಿ ಪೂರ್ಣಗೊಳಿಸಲು ತೀರ್ಮಾನಿಸಿತು" ಎಂಬ ತಿದ್ದುಪಡಿಯೊಂದಿಗೆ ಎಂಟನೇ ಸಾಮಾನ್ಯ ಸಿಂಡಿಕೇಟಿನ ಸಭೆಯ ನಡವಳಿಯನ್ನು ದೃಢೀಕರಿಸಲಾಯಿತು. |
| II | ದಿನಾಂಕ: 29-01-2021ರಂದು ಜರುಗಿದ "ಮೊದಲನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | ದಿನಾಂಕ: 29-01-2021 ರಂದು ಜರುಗಿದ "ಮೊದಲನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯ ನಡವಳಿಯನ್ನು ದೃಢೀಕರಿಸಲಾಯಿತು. |
| III | ದಿನಾಂಕ: 23-02-2021 ರಂದು ಜರುಗಿದ ಎರಡನೇ ಸಾಮಾನ್ಯ ಸಿಂಡಿಕೇಟಿನ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | ಶ್ರೀ ಆರ್. ಪ್ರದೀಪ್‌ಕುಮಾರ್ ದೀಕ್ಷಿತ್ ಅವರು ಮಾತನಾಡುತ್ತ ದಿನಾಂಕ: 29-01-2021ರ ಅನಾಮಧೇಯ ಪತ್ರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ಅಧ್ಯಾಪಕೇತರರು ಹಾಗೂ ಅತಿಥಿ ಉಪನ್ಯಾಸಕರ "ಅಕ್ರಮ ನೇಮಕಾತಿಯಲ್ಲಿ ಸಿಂಡಿಕೇಟ್ ಸದಸ್ಯರುಗಳು ಹಾಗೂ ವಿಶ್ವವಿದ್ಯಾನಿಲಯದ ಉನ್ನತ ಅಧಿಕಾರಿಗಳಿಂದ ಕರ್ತವ್ಯಲೋಪ ಹಾಗೂ ಅಧಿಕಾರ ದುರುಪಯೋಗ" ಎಂಬುದಾಗಿ ಉಲ್ಲೇಖಿಸಿ ಹಲವು ಮಾಹಿತಿಗಳ ಜೊತೆಗೆ ಸಿಂಡಿಕೇಟ್ ಸದಸ್ಯರುಗಳು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆಂದು ಹಾಗೂ ಹಣ ಪಡೆದು ತಾತ್ಕಾಲಿಕ ಅಧ್ಯಾಪಕೇತರ ಹಾಗೂ ಅತಿಥಿ ಉಪನ್ಯಾಸಕರುಗಳನ್ನು ಅಕ್ರಮವಾಗಿ ನೇಮಕಾತಿ ಮಾಡುತ್ತಿದ್ದಾರೆ ಎಂಬುದಾಗಿ ಗುರುತರವಾದ ಆರೋಪ ಮತ್ತು ಅಪವಾದವನ್ನು ಮಾಡಿರುತ್ತಾರೆಂದು ಆರೋಪಿಸಿರುತ್ತಾರೆ. ಸದರಿ ಪತ್ರದ ಲಕೋಟೆಯ ಮೇಲ್ಭಾಗದಲ್ಲಿ ಚಂದ್ರ, 8ನೇ ಕ್ರಾಸ್, 1ನೇ ಮುಖ್ಯ ರಸ್ತೆ, ಅಶೋಕಪುರಂ, ಮೈಸೂರು ಎಂದಿರುತ್ತದೆ. ಈ ಸಂಬಂಧ ಸೂಕ್ತ ತನಿಖೆ ಮಾಡಿಸುವಂತೆ ಅಧ್ಯಕ್ಷರನ್ನು ಕೋರಿದರು.<br><br>ಈ ಸಂಬಂಧ ಮಾನ್ಯ ಕುಲಪತಿಯವರು ಮಾತನಾಡುತ್ತಾ, ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ವಿಧಾನಸೌಧ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಸಿಆಸುಇ 21 ಸೇಇವಿ 2019 ದಿನಾಂಕ 03-10-2019ರಲ್ಲಿ ಸಹಿಯಿಲ್ಲದ ಅನಾಮಧೇಯ ದೂರು ಪತ್ರಗಳ ಆಧಾರದ ಮೇಲೆ ಪ್ರಕರಣವನ್ನು ತನಿಖೆಗೆ ಒಳಪಡಿಸಬಾರದೆಂದು, ಅಂತಹ ದೂರು ಅರ್ಜಿಗಳನ್ನು ಕಡತಗೊಳಿಸಬೇಕೆಂದು ಸೂಚಿಸಿರುತ್ತಾರೆಂದು ಸ್ಪಷ್ಟನೆ ನೀಡಿ ಈ ವಿಷಯವನ್ನು ಅಷ್ಟು ಗಂಭೀರವಾಗಿ ಪರಿಗಣಿಸದಿರುವಂತೆ ಸದಸ್ಯರಿಗೆ ತಿಳಿಸಿದರು.<br><br>2.13ರ ವಿಷಯಕ್ಕೆ ಸಂಬಂಧಿಸಿದಂತೆ ಸಿಂಡಿಕೇಟ್‌ನ ತೀರ್ಮಾನದಲ್ಲಿ MYRA ಸ್ಕೂಲ್ ಆಫ್ ಬಿಸಿನೆಸ್, ಮೈಸೂರು ಇವರ ಸಂಸ್ಥೆಗೆ Specialized Programme ಅಡಿಯಲ್ಲಿ BBA-Hons. and Finance) ಕೋರ್ಸ್‌ಗೆ intake 40ರ ಬದಲಿಗೆ 60 ಎಂದು ತಪ್ಪಾಗಿ (Typical Error) ನಮೂದಾಗಿರುವುದನ್ನು ಸರಿಪಡಿಸುವುದರೊಂದಿಗೆ ದಿನಾಂಕ: 29-01-2021ರ ನಡವಳಿಯನ್ನು ದೃಢೀಕರಿಸಲಾಯಿತು. |

| | |
|---|---|
| **IV** | ದಿನಾಂಕ: 29-01-2021ರಂದು ಜರುಗಿದ "ಮೊದಲನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ. |
| **ತೀರ್ಮಾನ** | ಕ್ರಮ ಕೈಗೊಂಡ ವರದಿಯನ್ನು ಗಮನಿಸಲಾಯಿತು. |
| **V** | ದಿನಾಂಕ: 23-02-2021ರಂದು ಜರುಗಿದ "ಎರಡನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ. |
| **ತೀರ್ಮಾನ** | ಕ್ರಮ ಕೈಗೊಂಡ ವರದಿಯನ್ನು ಗಮನಿಸಲಾಯಿತು. |
| **ಸಾಮಾನ್ಯ ಸಭೆ 2021/3.1** | ದಿವಂಗತ ಶ್ರೀ ಮಹದೇವು, ಅಧೀಕ್ಷಕರು, ಕಾಲೇಜು ಅಭಿವೃದ್ಧಿ ಮಂಡಳ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮಗನಾದ ಶ್ರೀ ಮುಖೇಶ್.ಎಂ ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ ದಿವಂಗತ ಶ್ರೀ ಮಹದೇವು, ಅಧೀಕ್ಷಕರು, ಕಾಲೇಜು ಅಭಿವೃದ್ಧಿ ಮಂಡಳ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮಗನಾದ ಶ್ರೀ ಮುಖೇಶ್.ಎಂ ಇವರು ಉದ್ಯೋಗ ಕೋರಿ ನಿಗಧಿತ ನಮೂನೆಯಲ್ಲಿ ಸಲ್ಲಿಸಿರುವ ಅರ್ಜಿ ಹಾಗೂ ಅರ್ಜಿಯಲ್ಲಿ ಲಗತ್ತಿಸಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದ ಸಭೆಯು ಶ್ರೀ ಮುಖೇಶ್.ಎಂ ಇವರನ್ನು ಅನುಕಂಪದ ಆಧಾರದ ಮೇಲೆ ಪರಿಚಾರಕರ ಹುದ್ದೆಯಲ್ಲಿ ನೇಮಕಾತಿ ಮಾಡಲು ಅನುಮೋದಿಸಿತು. |
| **ಸಾಮಾನ್ಯ ಸಭೆ 2021/3.2** | 2021ನೇ ಕ್ಯಾಲೆಂಡರ್ ವರ್ಷದಲ್ಲಿ ನಿವೃತ್ತಿ ವಯೋಮಾನ ತಲುಪುವ ಅಧ್ಯಾಪಕೇತರ ನೌಕರರಿಗೆ ಸೇವೆಯಿಂದ ನಿವೃತ್ತರಾಗಲು ಅನುಮತಿ ನೀಡುವ ಬಗೆಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಚಿಕ್ಕಲಿಂಗ, ಸೇವಕ ಇವರನ್ನು 2021ನೇ ಕ್ಯಾಲೆಂಡರ್ ವರ್ಷದ ನಿವೃತ್ತಿ ವಯೋಮಾನ ತಲುಪುವ ಅಧ್ಯಾಪಕೇತರ ನೌಕರರ ಪಟ್ಟಿಯಲ್ಲಿ ಬಿಟ್ಟುಹೋಗಿದ್ದರಿಂದ ದಿನಾಂಕ 31-12-2021ರಂದು ವಯೋನಿವೃತ್ತಿಹೊಂದುತ್ತಿರುವುದರಿಂದ ಸದರಿಯವರಿಗೆ ನಿವೃತ್ತಿ ಹೊಂದಲು ಅನುಮತಿಸಿ ಆದೇಶ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2021/3.3** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸ ವಾಲ್ಮೀಕಿ ಅಧ್ಯಯನ ಪೀಠ ಸ್ಥಾಪಿಸುವ ಬಗ್ಗೆ |
| | ಮೈಸೂರು ವಿಶ್ವವಿದ್ಯಾನಿಲಯದ ಆಂತರಿಕ ಅನುದಾನದಿಂದ ವ್ಯಾಸ ವಾಲ್ಮೀಕಿ ಅಧ್ಯಯನ ಪೀಠ ಸ್ಥಾಪಿಸುವುದೆಂದು, ಹೆಚ್ಚುವರಿ ಅನುದಾನಕ್ಕಾಗಿ ಪೀಠ ಸ್ಥಾಪನೆಯ ಉದ್ದೇಶವನ್ನು ವಿಸ್ತೃತವಾಗಿ ಸಭಾ ಸದಸ್ಯರುಗಳು ಚರ್ಚಿಸಿದರು.<br><br>ಡಾ. ಆರ್.ಪ್ರದೀಪ್‌ಕುಮಾರ್ ದೀಕ್ಷಿತ್ ಮಾತನಾಡಿ, ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಪೀಠ ಸ್ಥಾಪನೆಯ ಉದ್ದೇಶಗಳೊಡನೆ ವಿಸ್ತೃತವಾಗಿ ಪೂರ್ಣ ವಿವರಗಳೊಡನೆ ಬರೆದಿರುವುದಿಲ್ಲ. ಸದರಿ ಪೀಠವನ್ನು ಪ್ರಾರಂಭಿಸಲು ಮೈಸೂರು ವಿಶ್ವವಿದ್ಯಾನಿಲಯದ ಸಂಪನ್ಮೂಲದಿಂದ ಅನುದಾನ ನೀಡಿ ಹೆಚ್ಚಿನ ಅನುದಾನಕ್ಕೆ ಸಿಂಡಿಕೇಟ್ ಸದಸ್ಯರುಗಳ ನಿಯೋಗ ತೆರಳ ಸರ್ಕಾರಕ್ಕೆ ಮನವಿ ಸಲ್ಲಿಸಲು ನಿರ್ಣಯಿಸಲಾಗಿತ್ತು. ಆದರೆ, ಪತ್ರದಲ್ಲಿ ಪೀಠ ಸ್ಥಾಪನೆಗೆ ನೇರ ಅನುದಾನದ ಪ್ರಸ್ತಾವನೆ ಸಲ್ಲಿಸಿರುವುದು ಸರಿಯಲ್ಲ ಎಂದರು.<br><br>ಇದಕ್ಕೆ ಧನಿಗೂಡಿಸಿದ ಡಾ. ದಾಮೋದರರವರು ಮಾತನಾಡಿ, ಈ ಹಿಂದೆ ನಡೆದ ಸಿಂಡಿಕೇಟ್ ಸಭೆಯಲ್ಲೇ ನಮ್ಮ ವಿಶ್ವವಿದ್ಯಾನಿಲಯದಿಂದಲೇ ಪ್ರಾರಂಭಿಕ 5.00 ಲಕ್ಷ ಅನುದಾನದೊಂದಿಗೆ ಪ್ರಾರಂಭಿಸಲು ತೀರ್ಮಾನಿಸಲಾಗಿದೆ. ಅದರಂತೆ ಪೀಠ ಸ್ಥಾಪಿಸುವುದು ಸೂಕ್ತವೆಂದು ತಿಳಿಸಿದರು. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸ ವಾಲ್ಮೀಕಿ ಅಧ್ಯಯನ ಪೀಠ ಸ್ಥಾಪನೆಗೆ ಆಂತರಿಕ ಅನುದಾನ ಐದು ಲಕ್ಷ ರೂಪಾಯಿಗಳನ್ನು ಮೀಸಲಿಟ್ಟು ಪೀಠ ಪ್ರಾರಂಭಿಸಲು ಸರ್ವಾನುಮತದಿಂದ ಸಭೆಯಲ್ಲಿ ಅನುಮೋದಿಸಲಾಯಿತು. |

| | |
|---|---|
| ಸಾಮಾನ್ಯ ಸಭೆ 2021/3.4 | ವಿಶ್ವವಿದ್ಯಾನಿಲಯದ ಸಂಯೋಜಿತ ವಿದ್ಯಾಶ್ರಮ ಪ್ರಥಮ ದರ್ಜೆ ಕಾಲೇಜಿನ ದಾಖಲಾತಿಗಳನ್ನು ಪರಿಶೀಲಿಸಲು ರಚಿಸಿರುವ ಸಿಂಡಿಕೇಟ್ ಸಮಿತಿಯು ನೀಡಿರುವ ವರದಿಯನ್ನು ಮಂಡಿಸುತ್ತಿರುವ ಬಗ್ಗೆ. |
| | ದಿನಾಂಕ: 30-12-2020 ಮತ್ತು 29-01-2021ರಂದು ನಡೆದ ಸಿಂಡಿಕೇಟ್ ಸಭೆಗಳ ತೀರ್ಮಾನದನ್ವಯ ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜಿತ ವಿದ್ಯಾಶ್ರಮ ಪ್ರಥಮ ದರ್ಜೆ ಕಾಲೇಜಿಗೆ ಭೇಟಿನೀಡಿ ಶೈಕ್ಷಣಿಕ ದಾಖಲಾತಿಗಳನ್ನು ಪರಿಶೀಲಿಸಲು ರಚಿಸಲಾಗಿದ್ದ ಸಿಂಡಿಕೇಟ್ ಸಮಿತಿಯು ದಿನಾಂಕ: 24-02-2021ರಂದು ಕಾಲೇಜಿಗೆ ಭೇಟಿನೀಡಿ ಅಗತ್ಯ ದಾಖಲಾತಿಗಳನ್ನು ಪರಿಶೀಲಿಸಿದಾಗ ವಿದ್ಯಾಶ್ರಮ ಕಾಲೇಜಿನ ಕಟ್ಟಡದ ಲೀಸ್ ಅವಧಿಯು 06-04-2019ಕ್ಕೆ (21517 ಚದರ ಅಡಿ ಮತ್ತು 3007.30 ಚದರ ಅಡಿ) ಮುಗಿದಿರುತ್ತದೆ. ಮೂವತ್ತು ವರ್ಷಗಳ ಅವಧಿಗೆ 3713.27 ಚದರ ಅಡಿಗಳು ಮಾತ್ರ ಇರುತ್ತದೆ. ವಿದ್ಯಾಶ್ರಮ ಟ್ರಸ್ಟ್‌ನವರು 2019 ರಿಂದ ಬಾಡಿಗೆಯನ್ನು ಕಟ್ಟಡದ ಮಾಲೀಕರಿಗೆ ಪಾವತಿಸಿರುವುದಿಲ್ಲ ಹಾಗೂ ಅದೇ ಕಟ್ಟಡದಲ್ಲಿ ಪಿಯುಸಿ ತರಗತಿಗಳು ನಡೆಯುತ್ತಿವೆ. 2015-16ರಿಂದಲೂ ಪ್ರತಿ ವರ್ಷವು ಸ್ಥಳೀಯ ಪರೀವಿಕ್ಷಣಾ ಸಮಿತಿ(LIC)ಯು ಸ್ವಂತ ಕಟ್ಟಡಕ್ಕೆ ವರ್ಗಾವಣೆಗೊಳ್ಳಬೇಕೆಂದು ವಿದ್ಯಾಶ್ರಮ ಕಾಲೇಜಿಗೆ ಶಿಫಾರಸ್ಸು ನೀಡುತ್ತಾ ಬಂದಿದ್ದಾರೆ. ಆದರೂ ವಿದ್ಯಾಶ್ರಮ ಪ್ರಥಮ ದರ್ಜೆ ಕಾಲೇಜಿನವರು ಯಾವುದೇ ಕ್ರಮ ತೆಗೆದುಕೊಂಡಿಲ್ಲ. |
| ತೀರ್ಮಾನ | 2021-22ನೇ ಸಾಲಿನಲ್ಲಿ ಸ್ಥಳೀಯ ಪರೀವಿಕ್ಷಣಾ ಸಮಿತಿಯು ಭೇಟಿ ನೀಡುವ ಮುನ್ನವೇ ಸದರಿ ಕಾಲೇಜಿಗೆ ಎಚ್ಚರಿಕೆ ನೀಡಿ ಪತ್ರ ಬರೆಯಲು ನಿರ್ಧರಿಸಲಾಯಿತು ಮತ್ತು ಅದೇ ಕಟ್ಟಡದಲ್ಲಿ ಮುಂದುವರೆದರೆ ಪ್ರಥಮ ವರ್ಷದ ಪದವಿಯ ಪ್ರವೇಶಕ್ಕೆ ಸಂಯೋಜನೆ ನೀಡದಿರಲು ಸಹ ಸಿಂಡಿಕೇಟ್ ತೀರ್ಮಾನಿಸಿತು. |
| ಸಾಮಾನ್ಯ ಸಭೆ 2021/3.5 | ಭೂಗೋಳಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡಿರುವ ಬಗ್ಗೆ ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ. |
| ತೀರ್ಮಾನ | ಭೂಗೋಳಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ. ಬಿ.ಚಂದ್ರಶೇಖರ, ಪ್ರಾಧ್ಯಾಪಕರು ಇವರ ವಿಭಾಗದ ಅಧ್ಯಕ್ಷರ ಅವಧಿಯು ದಿನಾಂಕ: 06-03-2021ಕ್ಕೆ ಮುಕ್ತಾಯವಾಗಿರುವುದರಿಂದ, ಇವರ ನಂತರ ಜೇಷ್ಠತೆಯಲ್ಲಿ ಹಿರಿಯರಾಗಿರುವ ಪ್ರೊ. ಹೆಚ್.ನಾಗರಾಜು, ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ದಿನಾಂಕ: 08-03-2021ರಿಂದ ಅನ್ವಯವಾಗುವಂತೆ ಭೂಗೋಳಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನಾಗಿ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಕ ಮಾಡಿರುವುದನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2021/3.6 | "ಡಾ. ಎಸ್.ಪಿ.ಬಾಲಸುಬ್ರಹ್ಮಣಂ ಸಂಗೀತ ಅಧ್ಯಯನ ಪೀಠ" ಇವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪನೆಗೆ ಹಾಗೂ ಅದರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಚಿಸಲಾಗಿರುವ ಕರಡು ಅಧಿನಿಯಮದ ಅನುಮೋದನೆ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಡಾ. ಎಸ್.ಪಿ.ಬಾಲಸುಬ್ರಹ್ಮಣಂ ಸಂಗೀತ ಅಧ್ಯಯನ ಪೀಠ" ಇವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪನೆಗೆ ಹಾಗೂ ಅದರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಚಿಸಲಾಗಿರುವ ಕರಡು ಅಧಿನಿಯಮವನ್ನು ಶಿಫಾರಸ್ಸು ಮಾಡಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಕಾಯ್ದೆ 2000 ಪ್ರಕರಣ 41(6)ರನ್ವಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |

| | |
|---|---|
| **ಸಾಮಾನ್ಯ ಸಭೆ 2021/3.7** | ಐ.ಓ.ಇ. ಯೋಜನೆಯ ಅಧಿಕೃತ ಖಾತೆಯಲ್ಲಿ ಸಂಗ್ರಹವಾಗಿರುವ ಹಣವನ್ನು ಹಣಕಾಸು ವಿಭಾಗದ ಐ.ಓ.ಇ. ಖಾತೆಗೆ ವರ್ಗಾವಣೆ ಮಾಡುವ ಬಗ್ಗೆ. |
| | ಮಾನ್ಯ ಕುಲಪತಿಯವರು ಮಾತನಾಡಿ, ಸಂಯೋಜಕರು (ಪ್ರಭಾರ), ಐ.ಓ.ಇ ಯೋಜನೆ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಐ.ಓ.ಇ ಯೋಜನೆಯಲ್ಲಿನ ವೈಜ್ಞಾನಿಕ ಉಪಕರಣಗಳ Scientific sample analysis ಮತ್ತು ವಿಜ್ಞಾನ ಭವನದ ಸಭಾಂಗಣದ ಬಾಡಿಗೆಯಿಂದ ಸಂಗ್ರಹವಾಗುವ ಮೊತ್ತ ಮತ್ತು ಇನ್ನಿತರೆ ಉದ್ದೇಶಗಳಿಗಾಗಿ ಐ.ಓ.ಇ ಸಂಯೋಜಕರಿಗೆ ಪ್ರತ್ಯೇಕ ಖಾತೆಯನ್ನು ತೆರೆಯಲು ಅನುಮತಿ ನೀಡಲಾಗಿದೆ. ಸದರಿ ಖಾತೆಯಲ್ಲಿ Scientific Equipments and other sources ಗಳಿಂದ ಸಂಗ್ರಹವಾಗಿರುವ ಒಟ್ಟು ಅಂದಾಜು ಮೊತ್ತ ರೂ.27,70,840/-ಗಳಲ್ಲಿ ರೂ.20,00,000/-ಗಳನ್ನು ಹಣಕಾಸು ವಿಭಾಗದಲ್ಲಿ ನಿರ್ವಹಿಸುತ್ತಿರುವ ಐ.ಓ.ಇ ಖಾತೆ ಸಂಖ್ಯೆ: 64049535138ಗೆ ನಿಯಮಾನುಸಾರ ವರ್ಗಾಯಿಸಲು ಮತ್ತು ಸದರಿ ಮೊತ್ತವನ್ನು ಐ.ಓ.ಇ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಸಿಬ್ಬಂದಿಗಳ ವೇತನಕ್ಕೆ ಹಾಗೂ ಉಪಕರಣ ನಿರ್ವಹಣೆಗೆ ಮಾತ್ರವೇ ವಿನಿಯೋಗಿಸಲು ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆಯೆಂದು ಸಭೆಯಲ್ಲಿ ತಿಳಿಸಿದರು. |
| **ತೀರ್ಮಾನ** | ಐ.ಓ.ಇ ಯೋಜನೆಯಲ್ಲಿನ ವೈಜ್ಞಾನಿಕ ಉಪಕರಣಗಳ Scientific sample analysis ಮತ್ತು ವಿಜ್ಞಾನ ಭವನದ ಸಭಾಂಗಣದ ಬಾಡಿಗೆಯಿಂದ ಸಂಗ್ರಹವಾಗುವ ಮೊತ್ತ ಮತ್ತು ಇನ್ನಿತರೆ ಉದ್ದೇಶಗಳಿಗಾಗಿ ಐ.ಓ.ಇ ಸಂಯೋಜಕರಿಗೆ ಪ್ರತ್ಯೇಕ ಖಾತೆಯನ್ನು ತೆರೆಯಲು ಹಾಗೂ ಸದರಿ ಖಾತೆಯ ಮೊತ್ತವನ್ನು ಐ.ಓ.ಇ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಸಿಬ್ಬಂದಿಗಳ ವೇತನಕ್ಕೆ ಹಾಗೂ ಉಪಕರಣ ನಿರ್ವಹಣೆಗೆ ಮಾತ್ರವೇ ವಿನಿಯೋಗಿಸಲು ಆಡಳಿತಾತ್ಮಕ ಅನುಮತಿ ನೀಡಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2021/3.8** | ದೈಹಿಕ ಶಿಕ್ಷಣ ವಿಭಾಗದ ಆವರಣದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಯೋಗ ಮಂದಿರದ ನಿರ್ವಹಣಾ ಶುಲ್ಕ ನಿಗದಿಪಡಿಸುವ ಬಗೆಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ಆವರಣದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಯೋಗ ಮಂದಿರವನ್ನು ಕ್ರೀಡಾ ಚಟುವಟಿಕೆಗಳಿಗೆ ಮಾತ್ರ ಉಪಯೋಗಿಸಿಕೊಳ್ಳಲು ಸರ್ಕಾರಿ ಸಂಸ್ಥೆಗಳಿಗೆ, ಖಾಸಗಿ ಸಂಸ್ಥೆಗಳಿಗೆ, ಸಾರ್ವಜನಿಕರಿಗೆ ಹಾಗೂ ವಿಶ್ವವಿದ್ಯಾನಿಲಯ ಪ್ರಾಯೋಜಿತ ಕ್ರೀಡಾ ಕಾರ್ಯಕ್ರಮಗಳಿಗೆ ರೂ. 5000/- ಭದ್ರತಾ ಠೇವಣಿಯೊಂದಿಗೆ ಈ ಕೆಳಕಂಡಂತೆ ನಿರ್ವಹಣಾ ಶುಲ್ಕವನ್ನು ನಿಗಧಿಪಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. |

| ಕ್ರಮ ಸಂಖ್ಯೆ | ಸರ್ಕಾರಿ ಸಂಸ್ಥೆಗಳಿಗೆ | ಖಾಸಗಿ ಸಂಸ್ಥೆಗಳಿಗೆ | ಸಾರ್ವಜನಿಕರಿಗೆ | ವಿಶ್ವವಿದ್ಯಾನಿಲಯ ಪ್ರಾಯೋಜಿತ ಕ್ರೀಡಾ ಕಾರ್ಯಕ್ರಮಗಳಿಗೆ |
|---|---|---|---|---|
| 01 | 2500 + GST | 5000 + GST | 6000 + GST | ಉಚಿತ |

| | |
|---|---|
| **ಸಾಮಾನ್ಯ ಸಭೆ 2021/3.9** | Correct of error in the Compulsory Retirement Order issued to Dr. N. Anuradha, Associate Professor, Maharaja's College, Mysore-reg. |
| | ಮಾನ್ಯ ಕುಲಪತಿಗಳು ಮಾತನಾಡಿ, ಡಾ. ಎನ್. ಅನುರಾಧ, ಸಹ ಪ್ರಾಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು ಇವರು ದಿನಾಂಕ: 15-09-2014ರಿಂದ ಎರಡು ವರ್ಷಗಳು ಅನಧಿಕೃತವಾಗಿ ಗೈರುಹಾಜರಾಗಿದ್ದು, ಈ ಸಂಬಂಧ ವಿಶ್ವವಿದ್ಯಾನಿಲಯವು ನಿಯಮಾನುಸಾರ ಹಲವಾರು ನೋಟಿಸ್‌ಗಳನ್ನು ಜಾರಿಗೊಳಿಸಿದ್ದರೂ, ನೋಟಿಸ್‌ಗಳಿಗೂ ಉತ್ತರಿಸದೇ ಹಾಗೂ ಕಾಲೇಜಿಗೆ ಹಾಜರಾಗದೇ ಇರುವುದನ್ನು ಗಮನಿಸಿದ ವಿಶ್ವವಿದ್ಯಾನಿಲಯವು ದಿನಾಂಕ: 19-08-2016ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನದನ್ವಯ ಶ್ರೀ ಅಯ್ಯಣ್ಣರವರ ಅಧ್ಯಕ್ಷತೆಯಲ್ಲಿ ನ್ನು ಸಿಂಡಿಕೇಟ್ ಉಪಸಮಿತಿಯನ್ನು ರಚಿಸಲಾಯಿತು. |

| | |
|---|---|
| | ಸಿಂಡಿಕೇಟ್ ಉಪಸಮಿತಿಯ ವರದಿಯನ್ನು ದಿನಾಂಕ: 05-03-2018ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿ, ಸಭೆಯು ಈ ಕೆಳಕಂಡಂತೆ ತೀರ್ಮಾನಿಸಲಾಗಿರುತ್ತದೆ.<br>"ಡಾ. ಅನುರಾಧ ಎನ್, ಸಹ ಪ್ರಾಧ್ಯಾಪಕರು ಇವರ ಎರಡು ವರ್ಷಗಳ ಗೈರುಹಾಜರಿಯನ್ನು Leave without salary ಎಂದು ಪರಿಗಣಿಸಲು ಮತ್ತು ಸದರಿಯವರು ಸ್ವಯಂ ನಿವೃತ್ತಿ ತೆಗೆದುಕೊಳ್ಳುವುದರ ಬಗ್ಗೆ ಪರಿಶೀಲಿಸುವುದು. ಸಾಧ್ಯವಾಗದಿದ್ದಲ್ಲಿ ಕೆ.ಸಿ.ಎಸ್.ಆರ್ ನಿಯಮದಂತೆ ಅನುಸರಿಸಬೇಕಾದ ಕ್ರಮವನ್ನು ಕುಲಸಚಿವರು ನಿರ್ವಹಿಸಲು ಸೂಚಿಸಿ, ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಲು" ತೀರ್ಮಾನಿಸಿತು. ಇದರನ್ವಯ ವಿವಿ ಆದೇಶ ಸಂಖ್ಯೆ: ಇಟಿ.3/12/185/2012-13, ದಿನಾಂಕ: 20-07-2018ರ ಆದೇಶದಲ್ಲಿ ಡಾ.ಎನ್.ಅನುರಾಧ ಇವರು ದಿನಾಂಕ: 15-09-2014ರಿಂದ ಕರ್ತವ್ಯಕ್ಕೆ ಗೈರುಹಾಜರಾಗಿರುವುದರಿಂದ, ಈ ಆದೇಶದ ದಿನಾಂಕದವರೆಗೂ ಇವರ ಗೈರುಹಾಜರಿಯನ್ನು ವೇತನರಹಿತ ರಜೆಯೆಂದು ಪರಿಗಣಿಸತಕ್ಕದ್ದು ಹಾಗೂ ಈ ಆದೇಶದ ದಿನಾಂಕದಿಂದ ಜಾರಿಗೆ ಬಂದಂತೆ ಕೆ.ಸಿ.ಎಸ್.ಆರ್ ನಿಯಮ 95(3)ರ ಪ್ರಕಾರ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಿ ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಲಾಗಿದೆ. |
| ತೀರ್ಮಾನ | ಡಾ. ಎನ್. ಅನುರಾಧ, ಸಹ ಪ್ರಾಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು ಇವರನ್ನು ಕಡ್ಡಾಯ ನಿವೃತ್ತಿಗೊಳಿಸಿರುವ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ಸಭೆಯು ಕೆ.ಸಿ.ಎಸ್.ಆರ್ ನಿಯಮ 95(3)ರ ಬದಲಿಗೆ 285(4)ರ ಪ್ರಕಾರ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಿ ಪರಿಷ್ಕೃತ ಆದೇಶ ಹೊರಡಿಸಲು ಸಿಂಡಿಕೇಟ್ ಅನುಮೋದಿಸಿತು. |
| ಸಾಮಾನ್ಯ ಸಭೆ 2021/3.10 | ಶ್ರೀ ಟಿ.ಸಿ. ನಾರಾಯಣ, ಪ್ರಥಮ ದರ್ಜೆ ಗುಮಾಸ್ತರು, ಆಡಳಿತಾಧಿಕಾರಿಗಳ ಕಛೇರಿ, ಮಾನಸಗಂಗೋತ್ರಿ, ಮೈಸೂರು ಇವರ ತಾತ್ಕಾಲಿಕ ಸೇವೆಯನ್ನು ಖಾಯಂ ಸೇವೆಯನ್ನು ಪರಿಗಣಿಸುವ ಕುರಿತು. |
| ತೀರ್ಮಾನ | ಕರ್ನಾಟಕ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 23 ಎಸ್‌ಆರ್‌ಆರ್ 99, ದಿನಾಂಕ 23-11-2000ರ ಆದೇಶದನ್ವಯ ಶ್ರೀ ಟಿ.ಸಿ. ನಾರಾಯಣ, ಪ್ರಥಮ ದರ್ಜೆ ಗುಮಾಸ್ತರು, ಆಡಳಿತಾಧಿಕಾರಿಗಳ ಕಛೇರಿ, ಮಾನಸಗಂಗೋತ್ರಿ, ಮೈಸೂರು ಇವರ ತಾತ್ಕಾಲಿಕ ಸೇವೆಯನ್ನು ಖಾಯಂ ಸೇವೆಯಾಗಿ ಪರಿಗಣಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಗಮನಿಸಿ. ಕೂಲಂಕಷವಾಗಿ ಚರ್ಚಿಸಿದ ಸಭೆಯು ದಿನಾಂಕ: 23-11-2000ರಿಂದ ಜೇಷ್ಠತಾ ಪಟ್ಟಿಯಲ್ಲಿ ಸೇವಾ ಹಿರಿತನವನ್ನು ಪರಿಗಣಿಸುವ ಸಂಬಂಧ ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ನಿರ್ಧರಿಸಲು ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2021/3.11 | 2021-22ನೇ ಸಾಲಿನ ಆಯವ್ಯಯ ಅಂದಾಜುಗಳು "ಕರಡು" ಪಟ್ಟಿಯನ್ನು ಅನುಮೋದಿಸುವ ಬಗೆಗೆ. |
| | 2021-2022ನೇ ಸಾಲಿನ ಆಯವ್ಯಯ ಅಂದಾಜುಗಳು "ಕರಡು" ಪಟ್ಟಿಯನ್ನು ಈಗಾಗಲೇ ಹಣಕಾಸು ಸಮಿತಿಯಲ್ಲಿ ಅನುಮೋದಿಸಲಾಗಿರುತ್ತದೆ ಹಾಗೂ ಹಣಕಾಸು ಅಧಿಕಾರಿಯವರು ಸಭೆಯಲ್ಲಿ ಸಿದ್ಧಪಡಿಸಲಾಗಿರುವ 2021-2022ನೇ ಸಾಲಿನ ಆಯವ್ಯಯ ಅಂದಾಜುಗಳು "ಕರಡು" ಪಟ್ಟಿಯನ್ನು ಸವಿವರವಾಗಿ ಮಂಡಿಸಿದರು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ 2021-22ನೇ ಸಾಲಿನ ಆಯವ್ಯಯ ಅಂದಾಜುಗಳು "ಕರಡು" ಪಟ್ಟಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಸಿಂಡಿಕೇಟ್ ಅನುಮೋದಿಸಿತು. |
| ಸಾಮಾನ್ಯ ಸಭೆ 2021/3.12 | 2020-21ನೇ ಸಾಲಿನ ಆಯವ್ಯಯದಲ್ಲಿ ಮರುಹೊಂದಾಣಿಕೆ ಮಾಡಿಕೊಳ್ಳುವ ಬಗೆಗೆ. |
| | ಮಾನ್ಯ ಹಣಕಾಸು ಅಧಿಕಾರಿಯವರು ಮಾತನಾಡಿ, ವಿಶ್ವವಿದ್ಯಾನಿಲಯದ ಆರ್ಥಿಕ ಹಿತದೃಷ್ಟಿಯಿಂದ ಹಾಗೂ ಉದ್ಯೋಗಿಗಳಿಗೆ ನೀಡಬೇಕಾದ ನಿಯಮಾನುಸಾರ ವೇತನ ಹಾಗೂ |

| | |
|---|---|
| | ಪಿಂಚಣಿ ಸೌಲಭ್ಯಗಳಿಗೆ ಯಾವುದೇ ರೀತಿಯಲ್ಲಿ ಧಕ್ಕೆಯಾಗದಂತೆ 2020-21ನೇ ಸಾಲಿನ ಆಯವ್ಯಯದಲ್ಲಿ ಮರುಹೊಂದಾಣಿಕೆ ಮಾಡಿಕೊಳ್ಳಲಾಗಿದ್ದು, ಈಗಾಗಲೇ ವಿಶ್ವವಿದ್ಯಾನಿಲಯದ "ಹಣಕಾಸು ಸಮಿತಿ" ಸಭೆಯ ಮುಂದೆ ಮಂಡಿಸಿ ಅನುಮೋದನೆ ಪಡೆಯಲಾಗಿದೆಯೆಂದು ತಿಳಿಸುತ್ತಾ, 2020-21ನೇ ಸಾಲಿನ ಆಯವ್ಯಯದಲ್ಲಿ ಮರುಹೊಂದಾಣಿಕೆ ಮಾಡಿಕೊಳ್ಳಲಾಗಿರುವ ಶೀರ್ಷಿಕೆ, ಶೈಕ್ಷಣಿಕ ಚಟುವಟಿಕೆಗಳು ಹಾಗೂ ಇತರೆ ಚಟುವಟಿಕೆಗಳ ಬಗ್ಗೆ ಸಭೆಯಲ್ಲಿ ಸವಿಸ್ತಾರವಾಗಿ ಮಂಡಿಸುತ್ತಾ, ಇದಕ್ಕೆ ಸಿಂಡಿಕೇಟ್ ಸಭೆಯು ಅನುಮೋದಿಸಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ 2020-21ನೇ ಸಾಲಿನ ಆಯವ್ಯಯದಲ್ಲಿ ಮರುಹೊಂದಾಣಿಕೆ ಮಾಡಿಕೊಳ್ಳುವ ಕ್ರಮವನ್ನು ಪರಾಮರ್ಶಿಸಿದ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2021/3.13 | ಮಾನಸಗಂಗೋತ್ರಿಯ ಮಕ್ಕಳ ಪಾಲನಾ ಕೇಂದ್ರದ ಹೆಸರಿನಲ್ಲಿ 'ಕಾರ್ಪಸ್ ನಿಧಿ'ಯಾಗಿ ಹಣವಿರಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿ, ಮಾನಸಗಂಗೋತ್ರಿಯ ಮಕ್ಕಳ ಪಾಲನಾ ಕೇಂದ್ರದ ಹೆಸರಿನಲ್ಲಿ 'ಕಾರ್ಪಸ್ ನಿಧಿ'ಯಾಗಿ ಹಣವಿರಿಸುವ ಸಂಬಂಧ ಕ್ರಮ ಕೈಗೊಳ್ಳಲು ಸಭೆಯಲ್ಲಿ ನಿರ್ಣಯಿಸಲಾಯಿತು. |
| ಸಾಮಾನ್ಯ ಸಭೆ 2021/3.14 | ಯುಜಿಸಿ-ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಕ್ಕೆ Reserve Bank of India New Delhi ಇಲ್ಲಿ Treasury Single Account (TSA) ಖಾತೆ ತೆರೆದಿರುವ ಸಂಬಂಧ ಅನುಸಮರ್ಥನೆಗಾಗಿ. |
| | ಮಾನ್ಯ ಕುಲಪತಿಯವರು ಮಾತನಾಡಿ, ಅಧೀನ ಕಾರ್ಯದರ್ಶಿಗಳು, ಯುಜಿಸಿ, ನವದೆಹಲಿ ಇವರು ದಿನಾಂಕ: 27-01-2021ರ ಪತ್ರದಲ್ಲಿ ಯುಜಿಸಿ ಅನುದಾನದಿಂದ ಮಂಜೂರಾಗಿರುವ ಎಲ್ಲಾ ಯೋಜನೆಗಳಿಗೆ ಬಿಡುಗಡೆಯಾದ ಅನುದಾನವನ್ನು Treasury Single Account (TSA) System ಅಡಿಯಲ್ಲಿ RBI ಯಲ್ಲಿ ಖಾತೆಯನ್ನು ತೆರೆದು PFMS ಮೂಲಕ ಇನ್ನು ಮುಂದೆ ವ್ಯವಹರಿಸಬೇಕೆಂದು ಸೂಚಿಸಿರುವ ಹಿನ್ನೆಲೆಯಲ್ಲಿ ಯುಜಿಸಿ-ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಕ್ಕೆ Reserve Bank of India New Delhi ಇಲ್ಲಿ Treasury Single Account (TSA) ಖಾತೆ ತೆರೆಯಲಾಗಿದೆ. ಈ ಕ್ರಮವನ್ನು ದಿನಾಂಕ: 27-01-2021ರಂದು ಜರುಗಿದ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಲಾಗಿ, ಸಿಂಡಿಕೇಟ್ ತೀರ್ಮಾನವನ್ನು ಕಾಯ್ದಿರಿಸಿ ಅನುಮೋದನೆಯನ್ನು ಪಡೆಯಲಾಗಿದೆಯೆಂದು ಸಭೆಯಲ್ಲಿ ತಿಳಿಸಿದರು. |
| ತೀರ್ಮಾನ : | ಯುಜಿಸಿ-ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಕ್ಕೆ Reserve Bank of India New Delhi ಇಲ್ಲಿ Treasury Single Account (TSA) ಖಾತೆ ತೆರೆದಿರುವುದನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2021/3.15 | ICAR-DMRL ಯೋಜನೆಗಳ ಕಾರ್ಯವನ್ನು ನಿರ್ವಹಿಸಲು ಬ್ಯಾಂಕ್‌ನಲ್ಲಿ ಪ್ರತ್ಯೇಕ ಖಾತೆಯನ್ನು ತೆರೆದಿರುವ ಬಗ್ಗೆ. |
| | ICAR-DMRL ಯೋಜನೆಗಳ ಸಂಯೋಜಕರ ಮನವಿಯನ್ನು ಪುರಸ್ಕರಿಸಿ ಮಾನ್ಯ ಕುಲಪತಿಗಳ ಆದೇಶಾನುಸಾರ ಸದರಿ ಯೋಜನೆಯಲ್ಲಿ ಬಿಡುಗಡೆಯಾಗುವ ಅನುದಾನಗಳನ್ನು ಸ್ವೀಕರಿಸಲು ಹಾಗೂ ಯೋಜನೆಗಳ ಕಾರ್ಯವನ್ನು ನಿರ್ವಹಿಸಲು ಹಣಕಾಸು ಅಧಿಕಾರಿಗಳ ಹೆಸರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಆವರಣ ಶಾಖೆ ಇಲ್ಲಿ ಪ್ರತ್ಯೇಕ ಉಳಿತಾಯ ಖಾತೆ ಸಂಖ್ಯೆ: 39900700126 ಅನ್ನು ತೆರೆಯಲಾಗಿದೆ. |
| ತೀರ್ಮಾನ | ICAR-DMRL ಯೋಜನೆಗಳ ಕಾರ್ಯವನ್ನು ಸುಸೂತ್ರವಾಗಿ ನಿರ್ವಹಿಸಲು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಆವರಣ ಶಾಖೆ ಇಲ್ಲಿ ಪ್ರತ್ಯೇಕ ಉಳಿತಾಯ ಖಾತೆ ಸಂಖ್ಯೆ: 39900700126ಅನ್ನು ತೆರೆದಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಭೆಯು ಅನುಸಮರ್ಥಿಸಿತು. |

| | |
|---|---|
| ಸಾಮಾನ್ಯ ಸಭೆ 2021/3.16 | ಯುಜಿಸಿ–ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಕ್ಕೆ ಯುಜಿಸಿ ಅನುದಾನ ಕಾಯ್ದಿರಿಸಿ ವೇತನ ಹಾಗೂ ಇನ್ನಿತರ ಕಾರ್ಯಗಳಿಗೆ ಅನುದಾನ ನೀಡಿರುವ ಸಂಬಂಧ ಅನುಸಮರ್ಥನೆಗಾಗಿ. |
| ತೀರ್ಮಾನ | ಯುಜಿಸಿ–ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಕ್ಕೆ ಯುಜಿಸಿ ಅನುದಾನ ಕಾಯ್ದಿರಿಸಿ ವೇತನ ಹಾಗೂ ಇನ್ನಿತರ ಕಾರ್ಯಗಳಿಗೆ ಅನುದಾನ ನೀಡಿರುವ ಕ್ರಮವನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2021/3.17 | ಟಿಪ್ಪು ಸುಲ್ತಾನ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗೆಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿತವಾಗಿರುವ ಟಿಪ್ಪು ಸುಲ್ತಾನ್ ಪೀಠಕ್ಕೆ ಒಂದು ವರ್ಷದ ಅವಧಿಗೆ ಮಾಹೆಯಾನ ರೂ. 8,000/-ಗಳ ಗೌರವ ಸಂಭಾವನೆಯೊಂದಿಗೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಯರಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| ಸಾಮಾನ್ಯ ಸಭೆ 2021/3.18 | ಸ್ನಾತಕೋತ್ತರ ಪದವಿಯಲ್ಲಿ ಪ್ರಥಮ ರ್‍ಯಾಂಕ್ ಪಡೆಯುವ ಎಲ್ಲಾ ವಿದ್ಯಾರ್ಥಿಗಳಿಗೂ Mysore University Research Fellowship ಅನ್ನು ನೀಡಲು ಪ್ರಾರಂಭಿಸುವ ಬಗ್ಗೆ. |
| | ಡಾ. ಈ.ಸಿ.ನಿಂಗರಾಜಗೌಡ ಮಾತನಾಡಿ, ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ವಿಷಯಗಳಲ್ಲಿ ಪ್ರಥಮ ರ್‍ಯಾಂಕ್ ಪಡೆಯುವ ವಿದ್ಯಾರ್ಥಿಗಳಿಗೆ Mysore University Research Fellowship ಅನ್ನು ಕೊಡುವುದರಿಂದ ಗುಣಾತ್ಮಕ ಸಂಶೋಧನೆಯು ನಡೆಯುವುದರ ಜೊತೆಗೆ, ವಿದ್ಯಾರ್ಥಿಗಳಿಗೂ ನೆರವು ನೀಡಿದಂತಾಗುತ್ತದೆ ಎಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಸದರಿ ವಿದ್ಯಾರ್ಥಿಗಳು ಬೇರೆ ಏಜೆನ್ಸಿಯಿಂದ ಶಿಷ್ಯವೇತನ ಪಡೆದರೆ 2ನೇ ರ್‍ಯಾಂಕ್ ಅಥವಾ 3ನೇ ರ್‍ಯಾಂಕ್‌ನ ವಿದ್ಯಾರ್ಥಿಗಳಿಗೂ ಪರಿಗಣಿಸಬಹುದು ಎಂದು ಸಭೆಗೆ ತಿಳಿಸಿದರು. ಸುದೀರ್ಘ ಚರ್ಚೆಯ ನಂತರ ಒಂದು ಸಮಿತಿಯನ್ನು ರಚಿಸಿ ತೀರ್ಮಾನಿಸುವಂತೆ ಹಲವು ಮಾನ್ಯ ಸದಸ್ಯರು ತಿಳಿಸಿದರು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಪ್ರತಿ ವಿಷಯದ ಸ್ನಾತಕೋತ್ತರ ಪದವಿಯಲ್ಲಿ ಗರಿಷ್ಠ ಅಂಕವನ್ನು ಪಡೆದಿರುವ ಹಾಗೂ ಯಾವುದೇ ರೀತಿಯ ಶಿಷ್ಯವೇತನ ಪಡೆಯದೇ ಇರುವ ಒಬ್ಬ ವಿದ್ಯಾರ್ಥಿಗೆ Mysore University Research Fellowship ಅನ್ನು ನೀಡುವ ಸಂಬಂಧ ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಿ, ಸಮಿತಿಯು ನೀಡುವ ವರದಿಯಂತೆ ಕ್ರಮ ತೆಗೆದುಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2021/3.19 | ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಸಂಶೋಧನಾ ಸಹಾಯಕ ಗ್ರೇಡ್–1 ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ. |
| ತೀರ್ಮಾನ | ದಿನಾಂಕ: 04-01-2021ರಂದು ಜರುಗಿದ ಆಯ್ಕೆ ಸಮಿತಿ ಸಭೆಯಲ್ಲಿ ಸಂಶೋಧನಾ ಸಹಾಯಕ ಗ್ರೇಡ್–1 ಹುದ್ದೆಗೆ ಅವಶ್ಯವಿರುವ ವಿದ್ಯಾರ್ಹತೆ ಮತ್ತು ಸಂಪಾದನಾ ಅನುಭವವನ್ನು ಪರಿಗಣಿಸಿ ಡಾ. ಮಧುಸೂದನ್. ಡಿ, ಸಂಶೋಧನಾ ಸಹಾಯಕ ಗ್ರೇಡ್–2 ಹುದ್ದೆಯಿಂದ ಗ್ರೇಡ್–1 ಹುದ್ದೆಗೆ ಪದೋನ್ನತಿ ನೀಡಲು ಶಿಫಾರಸ್ಸು ಮಾಡಿರುವುದನ್ನು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2021/3.20 | ಯುಜಿಸಿ 7ನೇ ವೇತನ ಪರಿಷ್ಕರಣೆಯನ್ವಯದ ವೇತನಕ್ಕೆ ಪರಿಷ್ಕರಣೆಯಾದ ಪಿಂಚಣಿ ಮತ್ತು ಪಿಂಚಣಿ ಸೌಲಭ್ಯಗಳನ್ನು ಹಿಂಬಾಕಿ ಪಾವತಿಸುವ ಬಗ್ಗೆ. |
| ತೀರ್ಮಾನ | ದಿನಾಂಕ: 12.03.2020 ಹಾಗೂ 23.03.2020ರ ಸರ್ಕಾರಿ ಆದೇಶದಂತೆ ದಿನಾಂಕ: 01.01.2016ರಿಂದ ಜಾರಿಗೆ ಬಂದಂತೆ ಯ.ಜಿ.ಸಿ. 7ನೇ ವೇತನ ಪರಿಷ್ಕರಣೆಯನ್ವಯ ಪರಿಷ್ಕರಣೆಯಾದ ಪಿಂಚಣಿ ಮತ್ತು ಪಿಂಚಣಿ ಸೌಲಭ್ಯಗಳನ್ನು ದಿನಾಂಕ 01.04.2018 ರಿಂದ ಜಾರಿಗೆ ಬಂದಂತೆ ಪಾವತಿಸಬೇಕಾಗಿರುವ ಹಿನ್ನೆಲೆಯಲ್ಲಿ ದಿನಾಂಕ 01.01.2016ರ ನಂತರ |

| | |
|---|---|
| | ವಯೋನಿವೃತ್ತಿ/ಸೇವೆಯಲ್ಲಿದ್ದಾಗ ಮರಣ ಹೊಂದಿರುವ ಅಧ್ಯಾಪಕರುಗಳಿಗೆ ಪರಿಷ್ಕೃತ ಪಿಂಚಣಿ ಮತ್ತು ಪಿಂಚಣಿ ಸೌಲಭ್ಯಗಳ ಹಿಂಬಾಕಿ ಮೊತ್ತವನ್ನು ಪಾವತಿಸಲು ಸರ್ಕಾರಕ್ಕೆ ಅನುದಾನ ಕೋರಿ ಈಗಾಗಲೇ ಹಲವು ಬಾರಿ ಪತ್ರಗಳನ್ನು ಬರೆಯಲಾಗಿದೆ ಹಾಗೂ ಖುದ್ದಾಗಿ ಭೇಟಿ ಮಾಡಿ ಕೋರಿದ್ದರೂ ಸಹ ಇದುವರೆವಿಗೂ ಅನುದಾನ ಬಿಡುಗಡೆಗೊಂಡಿರುವುದಿಲ್ಲ.<br><br>ಈಗ ದಿನಾಂಕ: 01.01.2016ರ ನಂತರ ನಿವೃತ್ತಿ ಹೊಂದಿರುವ ಎಲ್ಲಾ ಪ್ರಾಧ್ಯಾಪಕರುಗಳು ಹಿಂಬಾಕಿ ಪಾವತಿಗಾಗಿ ಮಾನ್ಯ ಕುಲಪತಿಗಳು/ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳನ್ನು ಒತ್ತಾಯಿಸುತ್ತಿರುತ್ತಾರೆ. ದಿನಾಂಕ 01.01.2016 ರಿಂದ ದಿನಾಂಕ: 31.03.2021ರ ಅವಧಿಯಲ್ಲಿ ನಿವೃತ್ತರಾದ ಪ್ರಾಧ್ಯಾಪಕರುಗಳಿಗೆ ಪರಿಷ್ಕೃತ ಪಿಂಚಣಿ ಹಾಗೂ ಪಿಂಚಣಿ ಸೌಲಭ್ಯಗಳ ಹಿಂಬಾಕಿ ಪಾವತಿಸಲು ಸುಮಾರು ರೂ.25,00,00,000/-ಗಳು ಬೇಕಾಗಿರುತ್ತದೆ. 2020-2021ರ ಆಯವ್ಯಯದಲ್ಲಿ ಸರ್ಕಾರಕ್ಕೆ ಪಿಂಚಣಿ ಮತ್ತು ಪಿಂಚಣಿ ಸೌಲಭ್ಯಗಳನ್ನು ಪಾವತಿಸಲು ರೂ.75.42 ಕೋಟಿಗಳ ಅನುದಾನ ಕೋರಲಾಗಿತ್ತು. ಆದರೆ, ಸರ್ಕಾರದಿಂದ ರೂ. 39.86 ಕೋಟಿಗಳು ಮಾತ್ರ ಬಿಡುಗಡೆಯಾಗಿರುವ ಹಿನ್ನೆಲೆಯಲ್ಲಿ ಯು.ಜಿ.ಸಿ. 7ನೇ ಪರಿಷ್ಕೃತ ವೇತನ ಹಿಂಬಾಕಿ ಪಾವತಿಗಾಗಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ಹಿಂಬಾಕಿ ವೇತನ ಬಾಕಿ ಪಾವತಿಸಿ ಉಳಿದಿರುವ ಅನುದಾನವನ್ನು 7ನೇ ಪರಿಷ್ಕೃತ ಪಿಂಚಣಿ ಹಾಗೂ ಪಿಂಚಣಿ ಸೌಲಭ್ಯಗಳ ಹಿಂಬಾಕಿ ಪಾವತಿಸಲು ಅನುಮತಿ ಕೋರುತ್ತಾ, ಪಿಂಚಣಿ ಹಿಂಬಾಕಿ ಹಾಗೂ 2020-2021ರ ವ್ಯತ್ಯಾಸದ ಅನುದಾನವನ್ನು ಸರ್ಕಾರದಿಂದ ಬಿಡುಗಡೆಗೊಂಡ ನಂತರ ವೇತನ ಹಿಂಬಾಕಿ ಪಾವತಿಸಿ, ಬಾಕಿ ಉಳಿದಿರುವ ಮೊತ್ತವನ್ನು ಸರ್ಕಾರಕ್ಕೆ ಹಿಂದಿರುಗಿಸಲು ಕ್ರಮವಹಿಸಲಾಗುವುದು.<br>ಈ ವಿಷಯವನ್ನು ಸಿಂಡಿಕೇಟ್ ಸಭೆಯು ಸುದೀರ್ಘವಾಗಿ ಚರ್ಚಿಸಿ, ಪರಿಶೀಲಿಸಿ ಅನುಮೋದಿಸಿತು. |
| **ಸಾಮಾನ್ಯ ಸಭೆ 2021/3.21** | ಶ್ರೀ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ ಸಾಮಾಜಿಕ ಅಭಿವೃದ್ಧಿ ಕೇಂದ್ರಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗೆಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿತವಾಗಿರುವ ಶ್ರೀ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ ಸಾಮಾಜಿಕ ಅಭಿವೃದ್ಧಿ ಕೇಂದ್ರಕ್ಕೆ ಒಂದು ವರ್ಷದ ಅವಧಿಗೆ ಮಾಹೆಯಾನ ರೂ. 8,000/-ಗಳ ಗೌರವ ಸಂಭಾವನೆಯೊಂದಿಗೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಯರಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |

**ಇತರೆ ವಿಷಯಗಳು:**

1. ಮಾನ್ಯ ಸದಸ್ಯರಾದ ಪ್ರೊ. ವೆಂಕಟೇಶ್‌ಕುಮಾರ್‌ರವರು ಮಾತನಾಡಿ, ದೈಹಿಕ ಶಿಕ್ಷಣ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ. ಪುಲಕೇಶಿ ವೈ ಶೆಟ್ಟಪ್ಪನವರ್‌ರವರು ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದು ಅವರ ಸೇವಾ ನಿವೃತ್ತಿ ಅವಧಿಯು 62 ವರ್ಷವಾಗಿದ್ದರೂ 60 ವರ್ಷಕ್ಕೆ ವಿಶ್ವವಿದ್ಯಾನಿಲಯವು ನಿವೃತ್ತಿಗೊಳಿಸಿ, ಈ ಸಂಬಂಧವಾಗಿ ಶ್ರೀಯುತರು ನ್ಯಾಯಾಲಯದ ಮೊರೆ ಹೋಗಿದ್ದರು. ನ್ಯಾಯಾಲಯವು ವಿಶ್ವವಿದ್ಯಾನಿಲಯದ ಕ್ರಮವನ್ನು ಪ್ರಶ್ನಿಸಿ, ಸದರಿಯವರನ್ನು 62 ವರ್ಷಕ್ಕೆ ನಿವೃತ್ತಿಗೊಳಸಬೇಕೆಂದು ವಿಶ್ವವಿದ್ಯಾನಿಲಯಕ್ಕೆ ಆದೇಶಿಸಿದ್ದರೂ, ಪ್ರೊ. ಪುಲಕೇಶಿ ಯವರಿಗೆ 2 ವರ್ಷದ ವೇತನವನ್ನು ನೀಡದಿರುವುದು ಹಾಗೂ ನಿವೃತ್ತಿಗೊಂಡಿರುವ ಇವರಿಗೆ ಪಿಂಚಣಿ ಸೌಲಭ್ಯಗಳನ್ನು ಇದುವರೆವಿಗೂ ವಿತರಿಸದಿರುವುದರ ಬಗ್ಗೆ ಅಸಮಾಧಾನವನ್ನು ಸಭೆಯಲ್ಲಿ ವ್ಯಕ್ತಪಡಿಸಿದರು.

ಮಾನ್ಯ ಕುಲಪತಿಯವರು ಮಾನ್ಯ ಸದಸ್ಯರ ಅಭಿಪ್ರಾಯಕ್ಕೆ ಮನ್ನಣೆಯನ್ನು ನೀಡಿ, ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಪ್ರೊ. ಪುಲಕೇಶಿ ವೈ ಶೆಟ್ಟಪ್ಪನವರ್‌ರವರಿಗೆ ವಿಶ್ವವಿದ್ಯಾನಿಲಯವು

ತೆಗೆದುಕೊಂಡಿರುವ ಕ್ರಮದ ಬಗ್ಗೆ ಸುದೀರ್ಘವಾಗಿ ವಿವರಿಸಿ ನಿಯಮಾನುಸಾರ ಸೂಕ್ತಕ್ರಮ ಕೈಗೊಂಡು ಮುಂದಿನ ಸಭೆಯಲ್ಲಿ ಕ್ರಮಕೈಗೊಂಡ ಬಗ್ಗೆ ಮಾಹಿತಿ ಒದಗಿಸಲಾಗುವುದೆಂದು ಸಭೆಗೆ ತಿಳಿಸಿದರು.

ನಂತರ ಸಭೆಯು ಮಾನ್ಯ ಕುಲಪತಿಯವರ ನಿರ್ಣಯವನ್ನು ಅನುಮೋದಿಸಿತು.

2. ಮಾನ್ಯ ಸದಸ್ಯರಾದ ಡಾ. ನಿಂಗರಾಜ್‌ಗೌಡರವರು ಮತ್ತು ಡಾ. ದಾಮೋದರ್ ಅವರುಗಳು ಮಾತನಾಡಿ, ಅಕಾಡೆಮಿಕ್ ಕೌನ್ಸಿಲ್ ಸಭೆಗೆ ಸರ್ಕಾರದಿಂದ ಆಯ್ಕೆಯಾದ ಸದಸ್ಯರುಗಳು ಯಾವುದೇ ಹುದ್ದೆ ಅಥವಾ ಪಿಹೆಚ್.ಡಿ. ಶಿಷ್ಯವೇತನ ಪಡೆಯುತ್ತಿರಬಾರದು. ಆದರೆ ಒಬ್ಬ ನಾಮನಿರ್ದೇಶನಗೊಂಡಿರುವ ಒಬ್ಬ ಸದಸ್ಯರು ಮೈಸೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ. ವಿದ್ಯಾರ್ಥಿಯು ಸದಸ್ಯರಾಗಿ ಆಯ್ಕೆಗೊಂಡಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಯವರು ಈ ಬಗ್ಗೆ ಸ್ಪಷ್ಟೀಕರಣಕ್ಕಾಗಿ ಸರ್ಕಾರಕ್ಕೆ ಪತ್ರ ಬರೆಯಲಾಗುವುದೆಂದು ತಿಳಿಸಿದರು.

ನಂತರ ಮಾನ್ಯ ಕುಲಪತಿಯವರ ಸಲಹೆಯನ್ನು ಸಭೆಯು ಅನುಮೋದಿಸಿತು.

3. ಮಾನ್ಯ ಸದಸ್ಯರಾದ ಶ್ರೀ ದೊಡ್ಡಚಾರಿರವರು ಮಾತನಾಡಿ, ಸ್ನಾತಕ ಪದವಿ ಖಾಸಗಿ ಕಾಲೇಜುಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಕೆ.ನಂಜೇಗೌಡ, ಇವರು ತಮ್ಮ ಮನವಿ ಪತ್ರದಲ್ಲಿ ಪ್ಯಾರಿಟಿ ಶುಲ್ಕವನ್ನು ವಿಶ್ವವಿದ್ಯಾನಿಲಯವು ವಿಧಿಸಿರುವ ಬಗ್ಗೆ ತಿಳಿಸಿ, ಸದರಿ ಶುಲ್ಕಕ್ಕೆ ವಿಶ್ವವಿದ್ಯಾನಿಲಯದಿಂದ ವಿನಾಯ್ತಿ ನೀಡಬೇಕೆಂದು ತಿಳಿಸಿರುವುದನ್ನು ಸಭೆಯ ಗಮನಕ್ಕೆ ತಂದರು.

ನಂತರ ಮಾನ್ಯ ಕುಲಪತಿಯವರು ಮಾತನಾಡಿ, ಸದರಿ ಶುಲ್ಕವನ್ನು ವಿಶ್ವವಿದ್ಯಾನಿಲಯದ ಶುಲ್ಕಗಳ ಸಮಿತಿಯು ಶುಲ್ಕ ನಿಗಧಿಗೊಳಿಸಿ ಮಾಡಿರುವ ಶಿಫಾರಸ್ಸಿನಂತೆ ಸಿಂಡಿಕೇಟ್ ಸಭೆಯು ಈಗಾಗಲೇ ಅನುಮೋದಿಸಿರುವುದರಿಂದ, ವಿನಾಯ್ತಿ ನೀಡಲು ಸಾಧ್ಯವಿಲ್ಲವೆಂದು ಹಾಗೂ ಸದರಿ ಶುಲ್ಕವನ್ನು ವಿಶ್ವವಿದ್ಯಾನಿಲಯಕ್ಕೆ ಎರಡು ಸಮಾನ ಕಂತುಗಳಲ್ಲಿ ಪಾವತಿ ಮಾಡಲಿಕ್ಕೆ ಅವಕಾಶ ನೀಡಲು ಅನುಮತಿ ನೀಡಲಾಗುವುದೆಂದರು.

ಮಾನ್ಯ ಕುಲಪತಿಯವರ ತೀರ್ಮಾನವನ್ನು ಸಭೆಯು ಅನುಮೋದಿಸಿತು.

4. ಮಾನ್ಯ ಸದಸ್ಯರಾದ ಶ್ರೀ ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದಲ್ಲಿ ನಡೆದ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿದ ಕಾಲೇಜುಗಳಿಂದ ವಸೂಲು ಮಾಡಿರುವ ಶುಲ್ಕದ ರಶೀತಿಗೆ ರಸೀತಿ ಸಂಖ್ಯೆ ಇನ್ನಿತರ ಮಾಹಿತಿ ಇಲ್ಲದೇ ಸಹಿ ಮಾಡಿ ರಶೀತಿ ನೀಡುತ್ತಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಯವರು ಸದರಿ ವಿಷಯದ ಬಗ್ಗೆ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದರು.

5. ಮಾನ್ಯ ಸದಸ್ಯರಾದ ಶ್ರೀ ದೊಡ್ಡಚಾರಿರವರು ಮಾತನಾಡಿ, ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಪ್ರೌಢಶಾಲೆಗೆ ಸರ್ಕಾರದಿಂದ ನಿಯೋಜನೆ ಮೇಲೆ ನೇಮಕಗೊಂಡಿರುವ ಬೇರೆ ಶಾಲೆಯಿಂದ ವರ್ಗಾವಣೆಗೊಂಡಿರುವ ಇಬ್ಬರು ಶಿಕ್ಷಕರನ್ನು ಕರ್ತವ್ಯಕ್ಕೆ ವರದಿ ಮಾಡಿಸಿಕೊಳ್ಳದಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಯವರು ಸದರಿ ವಿಷಯದ ಬಗ್ಗೆ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದರು.

ನಂತರ ಮಾನ್ಯ ಕುಲಪತಿಯವರ ಕ್ರಮವನ್ನು ಸಭೆಯು ಅನುಮೋದಿಸಿತು.

ಮುಂದುವರೆದು ಮಾನ್ಯ ಸದಸ್ಯರಾದ ಶ್ರೀ ದೊಡ್ಡಚಾರಿರವರು ಮಾತನಾಡುತ್ತಾ, ಡಾ. ರಾಮಸ್ವಾಮಿ, ನಿವೃತ್ತ ಸಹಪ್ರಾಧ್ಯಾಪಕರು, ಮಹಾರಾಜ ಕಾಲೇಜು, ಇವರಿಗೆ ಸಿ.ಎ.ಎಸ್. ಅಡಿಯಲ್ಲಿ ಬರುವ ಸೌಲಭ್ಯವನ್ನು ನೀಡುವ ಬಗ್ಗೆ ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಡಾ.ರಾಮಸ್ವಾಮಿರವರು ನಿವೃತ್ತರಾದ ನಂತರ ಸಿ.ಎ.ಎಸ್. ನಡೆದಿರುವುದರಿಂದ ಸದರಿ ಸವಲತ್ತುಗಳನ್ನು ಅವರಿಗೆ ನೀಡಲು ಯುಜಿಸಿ ನಿಯಮಗಳಡಿಯಲ್ಲಿ ಅವಕಾಶವಿಲ್ಲವೆಂದು ಸಭೆಗೆ ತಿಳಿಸಿದರು.

ನಂತರ ಮಾನ್ಯ ಕುಲಪತಿಯವರ ಕ್ರಮವನ್ನು ಸಭೆಯು ಅನುಮೋದಿಸಿತು.

6. ಮಾನ್ಯ ಸದಸ್ಯರಾದ ಶ್ರೀ ಗಪ್ಪಣ್ಣರವರು ಮಾತನಾಡುತ್ತಾ, ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಪ್ರಮುಖ ಕಾರ್ಯಕ್ರಮಗಳು ನಡೆದರೂ ಅದನ್ನು ಸಿಂಡಿಕೇಟ್ ಗಮನಕ್ಕೆ ತರದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಮಾನ್ಯ ಸದಸ್ಯರ ಅಭಿಪ್ರಾಯವನ್ನು ಡಾ. ದಾಮೋದರ, ಡಾ. ಈ.ಸಿ.ನಿಂಗರಾಜ್‌ಗೌಡ ಹಾಗೂ ಇತರೆ ಸದಸ್ಯರುಗಳು ಅನುಮೋದಿಸಿದರು.

ನಂತರ ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಪ್ರಮುಖವಾಗಿ ನಡೆಯುವ ಪ್ರಮುಖ ಕಾರ್ಯಕ್ರಮಗಳ ಬಗ್ಗೆ ಸಿಂಡಿಕೇಟ್‌ನಲ್ಲಿ ಚರ್ಚಿಸಿ, ನಿರ್ಣಯ ಕೈಗೊಳ್ಳಲಾಗುವುದೆಂದು ತೀರ್ಮಾನಿಸಿ, ಸದರಿ ಕಾರ್ಯಕ್ರಮಗಳ ವಿವರಗಳನ್ನು/ಆಹ್ವಾನ ಪತ್ರಿಕೆಗಳನ್ನು ಸಿಂಡಿಕೇಟ್ ಸದಸ್ಯರನ್ನೊಳಗೊಂಡ ವಾಟ್ಸ್‌ಆಪ್ ಗ್ರೂಪ್‌ನ ಮುಖಾಂತರ ಕಳುಹಿಸುವ ಕಾರ್ಯವನ್ನು ಕುಲಪತಿಗಳ/ಕುಲಸಚಿವರ ಆಪ್ತಸಹಾಯಕರಿಗೆ ವಹಿಸಲು ಸೂಚಿಸಿದರು.

7. ಮಾನ್ಯ ಸಿಂಡಿಕೇಟ್ ಸದಸ್ಯರಾದ ಡಾ. ದಾಮೋದರರವರು ಮಾತನಾಡಿ, ಜೀವರಸಾಯನಶಾಸ್ತ್ರ ವಿಭಾಗದಲ್ಲಿ ಪ್ರೊ.ವಿಶ್ವನಾಥ್ ಇವರು ವಯೋನಿವೃತ್ತಿ ಹೊಂದಿದ್ದು, ಇವರಿಗೆ ನಿವೃತ್ತಿ ಸೌಲಭ್ಯಗಳು (ಕಮ್ಯೂಟೇಶನ್ ಮತ್ತು ಡಿ.ಸಿ.ಆರ್.ಜಿ) ಸಿಗದಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಯವರು ಸದರಿರವರಿಗೆ ಪಿಂಚಣಿ ಸೌಲಭ್ಯಗಳು ನೀಡುವ ಬಗ್ಗೆ ಕಾನೂನು ತಜ್ಞರ ಅಭಿಪ್ರಾಯ ಪಡೆದು ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದರು.

ನಂತರ ಮಾನ್ಯ ಕುಲಪತಿಯವರ ನಿರ್ಣಯವನ್ನು ಸಭೆಯು ಅನುಮೋದಿಸಿತು.

8. ಡಾ. ಚೈತ್ರನಾರಾಯಣ್‌ರವರು ಮಾತನಾಡಿ, ಮಾನಸಗಂಗೋತ್ರಿಯ ತತ್ವಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ.ಡ್ಯಾನಿಯಲ್ ಇವರು 2007 ರಿಂದ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರಿಗೆ ಇಲ್ಲಿಯವರೆಗೂ ಪ್ರೊಬೆಷನರಿ ಪೀರಿಯಡ್ ಡಿಕ್ಲೇರ್ ಆಗಿರುವುದಿಲ್ಲ. ಇದಕ್ಕೆ ಕಾರಣ, ಡಾ.ಖಂಡೋಬ ಎಂಬುವವರು ಸಮಾಜ ಕಲ್ಯಾಣ ಇಲಾಖೆಗೆ ಇವರ ನೇಮಕಾತಿಯ ಬಗ್ಗೆ ದೂರು ನೀಡಿದ್ದು ಸರಿಯಷ್ಟೆ. ಆದರೆ, ದೂರು ನೀಡಿದ ವ್ಯಕ್ತಿ ಈಗ ಮರಣ ಹೊಂದಿದ್ದು, ಇವರ ವಿಷಯವನ್ನು ಸಭೆಯ ಗಮನಕ್ಕೆ ತಂದರು.

ಡಾ. ಈ.ಸಿ.ನಿಂಗರಾಜ್‌ಗೌಡ ಮಾತನಾಡಿ, ಡಾ. ಡ್ಯಾನಿಯಲ್‌ರವರು ಡಾ. ಖಂಡೋಬ ರವರ ಮರಣ ಪತ್ರ ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ನಂತರ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಪ್ರೊಬೇಷನರಿ ಪೀರಿಯಡ್ ಡಿಕ್ಲೇರ್ ಮಾಡಬೇಕೆಂದರು.

ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಇವರ ವಿಷಯವನ್ನು ಚರ್ಚಿಸಿ, ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದೆಂದು ಸಭೆಯು ತೀರ್ಮಾನಿಸಿತು.

9. ವಿವಿಧ ಹುದ್ದೆಗಳಲ್ಲಿ ವಿಶೇಷ ಅಧಿಕಾರಿಗಳನ್ನು ಬದಲಾವಣೆ ಮಾಡುವ ಬಗ್ಗೆ ಹಾಗೂ ವಿವಿಧ ಕೇಂದ್ರಗಳಿಗೆ ನಿರ್ದೇಶಕರನ್ನು ಜಾಹೀರಾತು ಮುಖಾಂತರ ನೇಮಕ ಮಾಡಿಕೊಳ್ಳುವ ಬಗ್ಗೆ ಸಭೆಯು ಚರ್ಚಿಸಿ, ಮಾನ್ಯ ಕುಲಪತಿಯವರು ಪ್ರತಿಕ್ರಿಯಿಸಿ, ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರ ಹುದ್ದೆಯನ್ನು ಮರುಜಾಹೀರಾತು ಮಾಡಬೇಕು. ಇದರ ಜೊತೆಗೆ ಇ.ಎಂ.ಎಂ.ಆರ್.ಸಿ. ನಿರ್ದೇಶಕರ ಹುದ್ದೆ ಮತ್ತು ಹೆಚ್.ಆರ್.ಡಿ.ಸಿ. ನಿರ್ದೇಶಕರ ಹುದ್ದೆಗೆ ಜಾಹೀರಾತು ಹೊರಡಿಸುವ ಅಗತ್ಯತೆಯನ್ನು ವಿವರಿಸಿದರು. ಕೂಡಲೇ ಕ್ರಮ ತೆಗೆದುಕೊಳ್ಳಲು ಎಲ್ಲಾ ಸಿಂಡಿಕೇಟ್ ಸದಸ್ಯರು ಆಗ್ರಹಿಸಿದರು.

ನಂತರ ಸಭೆಯು ಮಾನ್ಯ ಸದಸ್ಯರುಗಳ ಕೋರಿಕೆಯನ್ನು ಅನುಮೋದಿಸಿತು.

**ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ**

**ಕುಲಪತಿಗಳು ಮತ್ತು ಅಧ್ಯಕ್ಷರು**